ಪ್ರಧಾನ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ
ಹುಬ್ಬಳ್ಳಿ
ಮೊಕದ್ದಮೆ ಸಂಃ ಸಿ ಸಿ 226/2012

ಸಿಡಬ್ಲ್ಯೂಃ 56
ಪಿಡಬ್ಲ್ಯೂಃ 32

| | |
|---|---|
| ಹೆಸರುಃ ವಿಜಯಕುಮಾರ | ವಯಸ್ಸು ಃ 64 |
| ತಂದೆಯ ಹೆಸರುಃ ಡಂಬಾಳೆ | ಉದ್ಯೋಗಃ ನಿವೃತ್ತ ಪೋಲಿಸ ಅಧಿಕಾರಿ |
| ವಾಸಸ್ಥಳಃ ಹುಬ್ಬಳ್ಳಿ | |

ದಿಃ 08.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನಾನು 2000 ರಿಂದ 2003 ರ ವರೆಗೂ ನಾನು ಹುಬ್ಬಳ್ಳಿ ಉಪನಗರ ಪೋಲಿಸ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 30.08.2000 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 10 ಗಂಟೆಗೆ ಫಿರ್ಯಾಸಾ 1 ರವರು ಠಾಣೆಗೆ ಹಾಜರಾಗಿ ನಿಶಾನೆ ಪಿ.1 ರಂತೆ ನೀಡಿದ ದೂರನ್ನು ಸ್ವೀಕರಿಸಿ ಪ್ರವವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರಿರುತ್ತೇನೆ. ನಿಪಿ.1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಶಾನೆ ಪಿ.1 ಬಿ ಎಂದು ಗುರುತಿಸಲಾಯಿತು. ಪ್ರವವ ವನ್ನು ನಿಪಿ.30 ಎಂದು ಅದರಲ್ಲಿನ ಸಾಕ್ಷಿ ಸಹಿಯನ್ನು ನಿಪಿ.30 ಎ ಎಂದು ಗುರುತಿಸಲಾಯಿತು.

ದಿ. 20.09.2000 ರಂದು ಚಾಸಾ 22 ರವರು ನನ್ನ ಮುಂದೆ ಹಾಜರಾಗಿ ಈ ಪ್ರಕರಣಕ್ಕೆ ಸಂಬಂಧಿಸಿದ ಮೂಲ ಚೆಕ್ಕುಗಳನ್ನು ಹಾಜರುಪಡಸಿದರು. ಸ್ದ.ಳಕ್ಕೆ ಚಾಸಾ 2, 3 ರವರನ್ನು ಬರಮಾಡಿಕೊಂಡು ಪಂಚನಾಮೆ ಮೂಲಕ ಚಾಸಾ 22 ರವರು ಹಾಜರುಪಡಿಸಿದ ಚೆಕ್ಕುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೆನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಎಂ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ನ್ಯಾಯಾಲಯ,. ಹುಬ್ಬಳ್ಳಿ.